**ಸಾಕ್ಷಿಯನ್ನು ದಿನಾಂಕ 06.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನನ್ನ ಮತ್ತು ಆರೋಪಿಯ ನಡುವೆ ಜನವರಿ 20224ರಂದು ಯಾವುದೇ ಜಗಳ ಆಗಿಲ್ಲ ಆದರೆ ಮಾತುಕತೆ ಮಾತ್ರ ಆಗಿರುತ್ತದೆ. ನನ್ನ ಮತ್ತು ಆರೋಪಿಯ ನಡುವೆ 2023 ಜನವರಿ ಯಾವುದೇ ಜಗಳವಾಗಲೀ ಅಥವಾ ಮಾತುಕತೆ ಆಗಿಲ್ಲ, ಜನವರಿ 2024 ರಲ್ಲಿ ಆರೋಪಿ ನನ್ನ ವಿರುದ್ದ. ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು ಅದರ ಸಂಬಂಧ ನಾನು ಠಾಣೆಗೆ ಹಾಜರಾಗಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ನಿರೀಕ್ಷಿತ ಜಾಮೀನನ್ನು ಪಡೆದು ಠಾಣೆಗೆ ಹಾಜರಾಗಿದ್ದೆ ಎಂದರೆ ಸರಿ. ಸದರಿ ಪ್ರಕರಣ ದಾಖಲಾದ ನಂತರ ನಾನು ಪುನಃ ಆರೋಪಿಗೆ ಧಮ್ಕಿ ಹಾಕಿದ ಕಾರಣ ಮತ್ತೊಂದು ಪ್ರಕರಣ ದಾಖಲಾಗಿ ಅದರಲ್ಲಿ ಜಾಮೀನು ಪಡೆದಿದ್ದೇನೆ ಎಂದರೆ ಸುಳ್ಳು. ಸದರಿ ಪ್ರಕರಣವು ಸಿಸಿ ನಂಬರ್ 30106/2024 ರಂತೆ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ಆರೋಪಿಯಿಂದ ನಾನು ರೂ.5,50,000/- ಪಡೆದು ನಾನು ಭದ್ರತೆಗಾಗಿ ಚೆಕ್ ಕೊಟ್ಟಿದ್ದು ಸದರಿ ಹಣವನ್ನು ಕೇಳಿದಾಗ ಆರೋಪಿಗೆ ಧಮ್ಕಿ ಹಾಕಿದ್ದೇನೆ ಎಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸುಳ್ಳು.

15. ಮತ್ತೊಂದು ದೂರನ್ನು ಆರೋಪಿ ನನ್ನ ಮೇಲೆ ಮೊಕದ್ದಮೆ ಸಂಖ್ಯೆ 263/2024 ರಂತೆ ದಾಖಲು ಮಾಡಿದ್ದರು ಎಂದರೆ ಸುಳ್ಳು. ಸದರಿ ಪ್ರಕರಣಗಳ ಬಗ್ಗೆ ನನಗ ಮನವರಿಕೆ ಇದ್ದು ಜಾಮೀನನ್ನು ಪಡೆದಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ವಿರುದ್ಧ ರೂ.5,50,000/- ರ ಬಗ್ಗೆ ಚೆಕ್ ಬೌನ್ಸ್ ಪ್ರಕರಣವನ್ನು ಹೂಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನಗೆ ಸಮನ್ಸ್ ಜಾರಿಯಾಗಿದ್ದರೂ ಸಹ ನ್ಯಾಯಾಲಯಕ್ಕೆ ನಾನು ಬಂದಿಲ್ಲ ಎಂದರೆ ಸರಿಯಲ್ಲ.

16. ಆರೋಪಿಗೆ ಕೊಟ್ಟಂತಹ ಸಾಲದ ಮೊತ್ತವನ್ನು ಅಕೌಂಟ್ ಮುಖಾಂತರ ಕೊಟ್ಟಿಲ್ಲ ಮನೆಯಲ್ಲಿ ನಗದಾಗಿ ಕೊಟ್ಟೆ. ನನಗೆ ಸೇರಿದ 3-4 ಬ್ಯಾಂಕ್ ಖಾತೆಗಳು ಇವೆ. ನಿಖರವಾಗಿ ಗೊತ್ತಿಲ್ಲ. ನಾನು 3-4 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು ಆರೋಪಿಗೆ ಕೊಟ್ಟಂತಹ ಹಣವನ್ನು ಬ್ಯಾಂಕ್ ಮುಖಾಂತರ ವರ್ಗಾಯಿಸಲು ಯಾವುದೇ ತೊಂದರೆ ಇರುತ್ತಿರಲಿಲ್ಲ ಎಂದರೆ ಆರೋಪಿಯು ನಗದಾಗಿಯೇ ಹಣ ಬೇಕು ಎಂದು ಕೇಳಿದ ಕಾರಣ ನಗದಾಗಿ ಕೊಟ್ಟೆ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಆರೋಪಿಗೆ ನಾನು ನಗದಾಗಿ 25 ಲಕ್ಷ ಹಣ ಕೊಟ್ಟಿದ್ದು ಮತ್ತು ಸದರಿ ಹಣಕ್ಕೆ ನಾನು ಯಾವುದೇ ಆದಾಯ ತೆರಿಗೆ ಪಾವತಿ

ಮಾಡದಿರುವುದು ಅಪರಾಧ ಎಂದರೆ ಅದು ಗೊತ್ತಿಲ್ಲ. ನನಗೆ ಕಾನೂನಿನ ಎಲ್ಲಾ ವಿಚಾರ ಗೊತ್ತಿದ್ದರೂ ನನ್ನ ಬಳಿ 25ಲಕ್ಷ ಇಲ್ಲದೇ ಇದ್ದ ಕಾರಣ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**17.** ಆರೋಪಿಯು ನನ್ನಿಂದ ಹಣ ಪಡೆಯುವಾಗ ಯಾವ ಉದ್ದೇಶಕ್ಕೆ ಅವರು ಹಣ ಪಡೆದರು ಎಂದು ಕೇಳಿರುತ್ತೀರಾ ಎಂಬ ಪ್ರಶ್ನೆಗೆ 2021-222 ನೇ ಸಾಲಿನಲ್ಲಿ ಅವರು ಮನೆ ಕಟ್ಟುತ್ತಿದ್ದರು, ಲೋನ್ ಆಗಿದ ತಕ್ಷಣ ಹಣ ಕೊಡುತ್ತೇನೆ ಎಂದು ಕೇಳಿ ಹಣ ಪಡೆದರು. 23022ರಲ್ಲಿ ಆರೋಪಿಯ ಮನೆ ಗೃಹ ಪ್ರವೇಶವಾಗಿರುತ್ತದೆ. ನನಗೆ ನಿಖರವಾದ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. 4 ಅಂತಸ್ತಿನ ಮನೆಯನ್ನು ಆರೋಪಿ ಕಟ್ಟಿರುತ್ತಾರೆ. ಆರೋಪಿಯು ನನ್ನಿಂದ ಹಣ ಪಡೆಯುವಾಗಲೇ ಪ್ರಶ್ನಿತ ಚೆಕ್ ಅನ್ನು ಕೊಟ್ಟಿರುತ್ತಾರೆ. ಆರೋಪಿ ನನಗೆ ಯಾವುದೇ ಚೆಕ್ ಅನ್ನು ಕೊಟ್ಟಿಲ್ಲ, ನಾನು ಆರೋಪಿಯಿಂದ ಪ್ರಶ್ನಿತ ಚೆಕ್ ಅನ್ನು ಕದ್ದಿದ್ದೇನೆ ಆದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**18.** ಆರೋಪಿಯ ಮೇಲೆ ಹೊರತುಪಡಿಸಿ ಇನ್ನು ಕೆಲವು ಚೆಕ್ ಬೌನ್ಸ್ ಪ್ರಕರಣಗಳನ್ನು ಇತರ ವ್ಯಕ್ತಿಗಳ ಮೇಲೆ ಸಲ್ಲಿಸಿದ್ದೇನೆ ಎಂದರೆ ಗೊತ್ತಿಲ್ಲ. ನಾನು ಜನತಾ ಕೋ ಆಪರೇಟಿವ್ ಸೊಸೈಟಿಯಲ್ಲಿ ಕ್ಯಾಶಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಿ.ಪಿ.2 ಬ್ಯಾಂಕಿನ ಹಿಂಬರಹದಲ್ಲಿ ಅಕೌಂಟ್ ಬ್ಲಾಕಡ್ ಎಂದು ಇದೆ ಎಂದರೆ ಹೌದು. ಆದರೆ ನಾನು ನನ್ನ ಪಿರ್ಯಾದಿಯಲ್ಲಿ ಇನ್ ಸಫಿಷಿಯಂಟ್ ಫಂಡ್ ಎಂದು ಹಾಕಿದ್ದೇನೆ ಎಂದರೆ ಅದು ಬೇರೆ ಹಿಂಬರಹ, ಬೇರೆ ಬ್ಯಾಂಕಿನಲ್ಲಿ ಹಾಕಿದಾಗ ಇನ ಸಫಿಷಿಯಂಟ್ ಫಂಡ್ ಎಂದು ಬಂದಿದೆ. ನಾನು ಅಫೆಕ್ಸ್ ಬ್ಯಾಂಕಿಗೆ ಪ್ರಶ್ನಿತ ಚೆಕ್ ಅನ್ನು ನಗದೀಕರಣಕ್ಕೆ ಹಾಕಿದಾಗ ಅಕೌಂಟ್ ಬ್ಲಾಕಡ್ ಎಂದು ಹಿಂಬರಹ ಬಂದಿದ್ದು ಸದರಿ ಅಂಶಕ್ಕೆ ಚಕ್ ಬೌನ್ಸ್ ಪ್ರಕರಣ ಹಾಕಲಾಗುವುದಿಲ್ಲ ಎಂದು ನಮ್ಮ ಕೋ-ಆಪರೇಟವ್ ಬ್ಯಾಂಕನ್ನು ದುರುಪಯೋಗಪಡಿಸಿಕೊಂಡು ಚೆಕ್ ಅನ್ನು ನಗದೀಕರಣಕ್ಕೆ ಇನ್ ಸಫಿಷಿಯಂಟ್ ಫಂಡ್ ಎಂಬ ಹಿಂಬರಹದೊಂದಿಗೆ ಬ್ಯಾಂಕ್ ಎಂಡಾರ್ಸ್ ಮೆಂಟನ್ನು ಪಡೆದು ಈ ಪ್ರಕರಣ ಹಾಕಿದ್ದೇನೆ ಎಂದರೆ ಸರಿಯಲ್ಲ.

**19.** ಆರೋಪಿಯ ಸಹಿಯ ಬರವಣಿಗೆಗೂ ಮತ್ತು ಒಕ್ಕಣೆಗಳ ಬರವಣಿಗೆಗೂ ವ್ಯತಾಸ ಇದೆ ಎಂದರೆ ಸುಳ್ಳು. ಆರೋಪಿಯು ದಿನಾಂಕಃ02.04.2021 ರಂದು ಪ್ರಶ್ನಿತ ಚೆಕ್ ಕಳುವು ಆಗಿರುತ್ತದೆ ಎಂದು ಸಂಬಂಧಪಟ್ಟ ಬ್ಯಾಂಕಿಗೆ ದೂರನ್ನು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಮುಂದುವರೆದು ಸದರಿ ಬ್ಯಾಂಕಿನಲ್ಲಿ ಅವರ ಸ್ವಂತ ನಾದಿನಿ ಇರುತ್ತಾರೆ. ಅಕೌಂಟ್ ಬ್ಲಾಕ್ ಅಗಿರುತ್ತದೆ ಎಂದು ನಿಮಗೆ ಯಾವಾಗ ಮಾಹಿತಿ ಬಂದಿರುತ್ತದೆ ಎಂಬ ಪ್ರಶ್ನೆಗೆ

ದಿನಾಂಕ**04.04.2024**ರಂದು ನಾನು ಪ್ರಶ್ನಿತ ಚೆಕ್ ಅನ್ನು ನಗದೀಕರಣಕ್ಕೆ ಸಲ್ಲಿಸಿದಾಗ ಖಾತೆಯು ಚಾಲ್ತಿಯಲ್ಲಿತ್ತು. ನಾನು ಪ್ರಶ್ನಿತ ಚೆಕ್ ಅನ್ನು ನಗದೀಕರಣಕ್ಕೆ ಸಲ್ಲಿಸಿದ್ದೇನೆ ಎಂದು ತಿಳಿದು ಆರೋಪಿಯ ನಾದಿನಿ ಸದರಿ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿರುವ ಕಾರಣ ಮರುದಿನ ಚದರಿ ಖಾತೆಯನ್ನು ಬ್ಲಾಕ್ ಮಾಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿಯ ಖಾತೆಯಿನ್ನು ಬ್ಲಾಕ್ ಮಾಡಿಸಿರುವುದು ಆದಾಯ ತೆರಿಗೆಯ ಇಲಾಖೆಯ ವಿಭಾಗದವರೇ ಹೊರತು ಆರೋಪಿಯ ನಾದಿನಿ ಅಲ್ಲ ಎಂದರೆ ಸುಳ್ಳು.

**20.** ಆರೋಪಿಯು ಪ್ರಶ್ನಿತ ಚೆಕ್ ಅನ್ನು ಸಹಿ ಮಾಡಿ ಡ್ರಾಯರ್ ನಲ್ಲಿ ಇಟ್ಟಿದ್ದು ಬ್ಯಾಂಕಿನ ಡೈರಕ್ಟರ್ ಕರೆದರು ಎಂದು ಅವರ ಬಳಿ ಹೋದಾಗ ಆರೋಪಿಯ ಡ್ರಾಯರ್ ನಿಂದ ಸದರಿ ಚೆಕ್ ಅನ್ನು ಕದ್ದಿರುತ್ತೇನೆ ಎಂದರೆ ಸುಳ್ಳು. ಆರೋಪಿಗೆ ಪ್ರಶ್ನಿತ ಚೆಕ್ ನನ್ನ ಬಳಿ ಇದೆ ಎಂದು ಗೊತ್ತಾಗಿದ್ದರೆ ಅವರು ದೂರನ್ನು ನನ್ನ ಮೇಲೆ ಕೊಟ್ಟಾಗಲೇ ಪ್ರಶ್ನಿತ ಚೆಕ್ ಅನ್ನು ಪ್ರಸ್ತಾಪ ಮಾಡುತ್ತಿದ್ದರು ಅವರಿಗೆ ಗೊತ್ತಿಲ್ಲದ ಕಾರಣ ಅವರು ಸದರಿ ವಿಚಾರದ ಬಗ್ಗೆ ಸದರಿ ದೂರಿನಲ್ಲಿ ಪ್ರಸ್ತಾಪ ಮಾಡಿಲ್ಲ ಎಂದರೆ ಸುಳ್ಳು. ಆರೋಪಿಯು ನನ್ನ ಮೇಲೆ ದೂರುಗಳನ್ನು ದಾಖಲು ಮಾಡಿದ ನಂತರ ನಾನು ಕದ್ದಿದ್ದ ಆರೋಪಿಯ ಚೆಕ್ ಅನ್ನು ದುರುಪಯೋಗಪಡಿಸಿಕೊಡಿದ್ದೇನೆ ಎಂದರೆ ಸುಳ್ಳು.

**ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**